ಕಛೇರಿ : +91 80 2335 4039
+91 80 2335 4085
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ
## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಸಂಖ್ಯೆ:ಎನ್‌ವಿಬಿಡಿಸಿಪಿ/ಇಎಸ್‌ಟಿ-7ಝಡ್/ಕೋವಿಡ್19/2020-21 ದಿನಾಂಕ:28.6.2022

## ಸುತ್ತೋಲೆ

ವಿಷಯ: ಕೋವಿಡ್-19 : ಬಿ ಬಿ ಎಂ ಪಿ ಹಾಗೂ ಬೆಂಗಳೂರು ನಗರ ಜಿಲ್ಲೆಯ ಕಛೇರಿಗಳು ವಿದ್ಯಾ ಸಂಸ್ಥೆ , ಕಾಲೇಜುಗಳು ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ಕೋವಿಡ್ 19 ಪರೀಕ್ಷೆ, ಐಸೋಲೇಷನ್, ಚಿಕಿತ್ಸೆ ಹಾಗೂ ಕ್ವಾರೆಂಟೈನ್‌ಗೆ ಸಂಬಂಧಿಸಿದ ಪರಿಷ್ಕೃತ ಮಾರ್ಗಸೂಚಿಗಳು.

ಉಲ್ಲೇಖ: ರಾಜ್ಯ ಕೋವಿಡ್-19 ತಾಂತ್ರಿಕ ಸಲಹಾ ಸಮಿತಿಯ 174ನೇ ಸಭೆಯ ನಡಾವಳಿಯ ಅನ್ವಯ, ದಿನಾಂಕ:23.06.2022.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:10.6.2022ರಿಂದ ಬೆಂಗಳೂರು ನಗರದಲ್ಲಿ ಕೋವಿಡ್-19 ಸೋಂಕಿತ ಪ್ರಕರಣಗಳು ನಿಧಾನಗತಿಯಲ್ಲಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಬಿ ಬಿ ಎಂ ಪಿ ಹಾಗೂ ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯ ವಿದ್ಯಾ ಸಂಸ್ಥೆ , ಕಾಲೇಜುಗಳು ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ಕೋವಿಡ್ 19 ಪರೀಕ್ಷೆ, ಚಿಕಿತ್ಸೆ ಹಾಗೂ ಕ್ವಾರೆಂಟೈನ್‌ಗೆ ಸಂಬಂಧಿಸಿದಂತೆ, ಈ ಕೆಳಕಂಡ ಪರಿಷ್ಕೃತ ಮಾರ್ಗಸೂಚಿಯನ್ನು ಪಾಲಿಸುವುದು ಕಡ್ಡಾಯವಾಗಿರುತ್ತದೆ.

1. **ವಸತಿ ಸಮುಚ್ಚಯ / ಅಪಾರ್ಟ್‌ಮೆಂಟ್‌ಗಳು**

ವಸತಿ ಸಮುಚ್ಚಯಗಳು/ಅಪಾರ್ಟ್‌ಮೆಂಟ್‌ಗಳಲ್ಲಿ ಕೋವಿಡ್ 19 ಕ್ಲಸ್ಟರ್ ಪ್ರಕರಣಗಳು ವರದಿಯಾದ ಸಂದರ್ಭಗಳಲ್ಲಿ ಕೆಳಕಂಡ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಬೇಕು.

- 3-5 ಕೋವಿಡ್ ಪ್ರಕರಣಗಳು ವರದಿಯಾದಲ್ಲಿ ಸಣ್ಣ ಕ್ಲಸ್ಟರ್ ಎಂದು ಪರಿಗಣಿಸಿ, ಅಪಾರ್ಟ್‌ಮೆಂಟ್‌ನ ಸಂಬಂಧಪಟ್ಟ ಬ್ಲಾಕ್‌ನ ಫ್ಲೋರ್‌ನಲ್ಲಿ ಸೋಂಕಿನ ಲಕ್ಷಣಗಳನ್ನು ಹೊಂದಿರುವ ಎಲ್ಲರನ್ನೂ ; 5 ಕ್ಕಿಂತ ಹೆಚ್ಚು ಪ್ರಕರಣಗಳನ್ನು ದೊಡ್ಡ ಕ್ಲಸ್ಟರ್ ಎಂದು ಪರಿಗಣಿಸಿ ಅಪಾರ್ಟ್‌ಮೆಂಟ್‌ನ ಬ್ಲಾಕ್/ ಟವರ್‌ನಲ್ಲಿ ಸೋಂಕಿನ ಲಕ್ಷಣಗಳನ್ನು ಹೊಂದಿರುವವರನ್ನು ;15 ಅಥವಾ ಅದಕ್ಕಿಂತ ಹೆಚ್ಚು ಪ್ರಕರಣಗಳು ವರದಿಯಾದಾಗ ಸ್ಫೋಟಗೊಂಡಾಗ ಸ್ಥಳೀಯ ಆರೋಗ್ಯ ಪ್ರಾಧಿಕಾರವು ನಿರ್ಧರಿಸುವಂತೆ, ಇಡೀ ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ನಲ್ಲಿ ಸೋಂಕಿನ ಲಕ್ಷಣಗಳನ್ನು ಹೊಂದಿರುವ ಎಲ್ಲರನ್ನೂ ರ್‍ಯಾಪಿಡ್ ಆಂಟಿಜೆನ್ ಟೆಸ್ಟ್‌ಗೆ ಒಳಪಡಿಸಬೇಕು. ಪಾಸಿಟಿವ್ ಫಲಿತಾಂಶ ಬಂದವರನ್ನು ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿಯ ಅನ್ವಯ ಹಾಗೂ ಪಾಸಿಟಿವ್ ವ್ಯಕ್ತಿಯ ಆರೋಗ್ಯ ಸ್ಥಿತಿಗೆ ಅನುಗುಣವಾಗಿ ಹೋಂ ಐಸೋಲೇಷನ್/ CCC/ ಆಸ್ಪತ್ರೆಗೆ ದಾಖಲಿಸುವಂತೆ ಕ್ರಮ ವಹಿಸುವುದು.
- ರ್‍ಯಾಪಿಡ್ ಆಂಟಿಜೆನ್ ಟೆಸ್ಟ್ ಪಾಸಿಟಿವ್ ಪ್ರಕರಣಗಳಿಂದ ಹೆಚ್ಚುವರಿಯಾಗಿ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಮಾದರಿಯನ್ನು ಸಂಗ್ರಹಿಸುವುದು ಹಾಗೂ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಪಾಸಿಟಿವ್ ಫಲಿತಾಂಶದ ಮಾದರಿಗಳ ಸಿ ಟಿ ವ್ಯಾಲ್ಯೂ >25 ಇದ್ದಲ್ಲಿ ಜೀನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸುವುದು.
- ಸಮಸ್ಯಾತ್ಮಕ ಗುಂಪಿನ ಅಂದರೆ, 60 ವರ್ಷ ಮೇಲ್ಪಟ್ಟವರು ಹಾಗೂ ಇತರ ಗಂಭೀರ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ, ರೋಗ ಲಕ್ಷಣಗಳಿಲ್ಲದವರಿಗೆ ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸುವುದು.
- ಸೋಂಕಿನ ಲಕ್ಷಣ ರಹಿತರಿಗೆ ದೊಡ್ಡ ಪ್ರಮಾಣದ / ಸಾಮೂಹಿಕ ಕೋವಿಡ್ 19 ಪರೀಕ್ಷೆಗಳನ್ನು ಶಿಫಾರಸ್ಸು ಮಾಡುವಂತಿಲ್ಲ. ಆದರೆ ಪ್ರಾಥಮಿಕ ಸಂಪರ್ಕಿತರಿಗೆ ಇದು ಅನ್ವಯವಾಗುವುದಿಲ್ಲ.
- ಸಾಮಾನ್ಯ ಪ್ರದೇಶಗಳಲ್ಲಿ ಕೋವಿಡ್-19 ಸೂಕ್ತ ನಡವಳಿಕೆಗಳಾದ ಮಾಸ್ಕ್ ಧರಿಸುವಿಕೆ ಇತ್ಯಾದಿಗಳನ್ನು ಕಡ್ಡಾಯವಾಗಿ ಜಾರಿಗೊಳಿಸುವುದು.

RLp

- ಹೋಂ ಐಸೋಲೇಷನ್ ನಲ್ಲಿರುವ ಕೋವಿಡ್-19 ಸೋಂಕಿತ ವ್ಯಕ್ತಿಗಳ ಮನೆಯಲ್ಲಿ ಮನೆ ಕೆಲಸದವರು ಈ ಕೆಳಕಂಡ ಕ್ರಮಗಳನ್ನು ಅನುಸರಿಸಬೇಕು.
    - ಮನೆ ಕೆಲಸದ ಸಹಾಯಕರು / ಮನೆ ಕೆಲಸದವರು 60 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು.
    - ರೋಗ ಲಕ್ಷಣಗಳಿಂದ (ಜ್ವರ/ ಕೆಮ್ಮು/ ನೆಗಡಿ/ಗಂಟಲು ನೋವು/ಉಸಿರಾಟದ ತೊಂದರೆ ಇತ್ಯಾದಿ) ಕಡ್ಡಾಯವಾಗಿ ಮುಕ್ತವಾಗಿರಬೇಕು.
    - ಸೋಂಕಿತರ ಮನೆಯಲ್ಲಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ N-95 ಮುಖ ಗವಸು / ಮಾಸ್ಕ್ ಧರಿಸುವುದು.
    - ಕೋವಿಡ್ 19ನ ಎರಡು ಡೋಸ್ ಗಳು / ಮುನ್ನೆಚ್ಚರಿಕಾ ಡೋಸ್ ಲಸಿಕೆ ಪಡೆದಿರುವುದು ಅಪೇಕ್ಷಣೀಯ.
- ವರದಿಯಾದ ಕೋವಿಡ್ 19 ನ ಕೊನೆಯ ಪ್ರಕರಣವು ಗುಣಮುಖವಾಗುವವರೆಗೂ ಸಾಮಾನ್ಯ ಸೌಲಭ್ಯಗಳಾದ ಕ್ಲಬ್ ಹೌಸ್, ಈಜುಕೊಳ, ಕ್ರೀಡಾಕೊಠಡಿ, ಸಂಘದಕಛೇರಿ ಇತ್ಯಾದಿಗಳನ್ನು ಮುಚ್ಚುವುದು, ನಂತರ, 1% ಸೋಡಿಯಂ ಹೈಪೋ ಕ್ಲೋರೈಟ್ ದ್ರಾವಣದಿಂದ (1ಗಂಟೆ ಸಂಪರ್ಕ ಸಮಯ) ಸ್ಯಾನಿಟೈಸ್ ಮಾಡಿ , ಸಾಮಾನ್ಯ ಸೌಲಭ್ಯಗಳನ್ನು ಪುರ್ನಬಳಕೆ ಮಾಡುವುದು.
- ಈ ಅವಧಿಯಲ್ಲಿ ಫ್ಲೋರ್ /ಟವರ್ /ಬ್ಲಾಕ್ /ಅಪಾರ್ಟ್‌ಮೆಂಟ್ ಕಾಂಪ್ಲೆಕ್ಸ್‌ಗಳನ್ನು ಸೀಲ್‌ಡೌನ್/ ಕ್ಲೋಸ್‌ಡೌನ್ ಮಾಡುವ ಅಗತ್ಯವಿರುವುದಿಲ್ಲ.
- ಕ್ಲಸ್ಟರ್ / ಸಾಂಕ್ರಾಮಿಕ ಸ್ಫೋಟದ ನಿಯಮಗಳನ್ನು ಸ್ಥಳೀಯ ಆರೋಗ್ಯ ಪ್ರಾಧಿಕಾರವು ತೆರವುಗೊಳಿಸಿದ ನಂತರ ಬಾಕಿ ಇರುವ ಮುನ್ನೆಚ್ಚರಿಕಾ ಡೋಸ್ ಲಸಿಕೆ ಪಡೆಯಲು ಪ್ರೇರೇಪಿಸುವುದು.

2. **ಕಛೇರಿಗಳು ಹಾಗೂ ವಿದ್ಯಾಸಂಸ್ಥೆಗಳು /ಕಾಲೇಜ್‌ಗಳಲ್ಲಿ (12ನೇ ತರಗತಿವರೆಗಿನ ಶಾಲೆ ಹೊರತುಪಡಿಸಿ).**

- ಕೋವಿಡ್ 19ನ ಲಕ್ಷಣಗಳನ್ನು ಹೊಂದಿರುವವರು ಕಛೇರಿಗಳು ಮತ್ತು ಕಾಲೇಜುಗಳಿಗೆ ಹಾಜರಾಗದಂತೆ ಸೂಚಿಸುವುದು. ಸದರಿಯವರ ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆಯಲ್ಲಿ ಪಾಸಿಟಿವ್ ಫಲಿತಾಂಶ ಬಂದಲ್ಲಿ, ಶಿಷ್ಟಾಚಾರದ ಅನ್ವಯ ಐಸೋಲೆಷನ್‌ನಲ್ಲಿ ಇರಿಸಿ ನಿರ್ವಹಣೆ ಮಾಡುವುದು. ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆಯಲ್ಲಿ ನೆಗೆಟಿವ್ ಫಲಿತಾಂಶ ಬಂದಲ್ಲಿ, ಆರ್‌ಟಿಪಿಸಿಆರ್ ಮಾದರಿಯನ್ನು ನೀಡಿ , ಐಸೊಲೇಷನ್ ನಲ್ಲಿದ್ದು, ಫಲಿತಾಂಶವನ್ನು ನಿರೀಕ್ಷಿಸುವುದು. ಫಲಿತಾಂಶದ ನಂತರ ಅಗತ್ಯ ಕ್ರಮ ವಹಿಸುವುದು.
- ಕೋವಿಡ್ 19 ದೃಢಪಟ್ಟ ವ್ಯಕ್ತಿಗಳ ಪ್ರಾಥಮಿಕ ಸಂಪರ್ಕಿತರಲ್ಲಿ ಸೋಂಕಿನ ಲಕ್ಷಣಗಳು ಕಂಡು ಬಂದಲ್ಲಿ ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆಗೆ ಒಳಪಡಿಸುವುದು. ಪಾಸಿಟಿವ್ ಫಲಿತಾಂಶ ದೃಢಪಟ್ಟಲ್ಲಿ ಶಿಷ್ಟಾಚಾರದ ಅನ್ವಯ ಕ್ರಮ ವಹಿಸುವುದು.
- ಕ್ಲಸ್ಟರ್ / ಸಾಂಕ್ರಾಮಿಕ ಸ್ಫೋಟಗಳು ವರದಿಯಾದಲ್ಲಿ ರೋಗ ಲಕ್ಷಣಗಳಿರುವವರಿಗೆ ರ್‍ಯಾಪಿಡ್ ಆಂಟಿಜೆನ್ ಪರೀಕ್ಷೆ ಮಾಡುವುದು. ದೃಢಪಟ್ಟ ಪ್ರಕರಣಗಳನ್ನು ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿಯ ಅನ್ವಯ ಹಾಗೂ ಪಾಸಿಟಿವ್ ವ್ಯಕ್ತಿಯ ಆರೋಗ್ಯ ಸ್ಥಿತಿಗೆ ಅನುಗುಣವಾಗಿ ಹೋಂ ಐಸೊಲೇಷನ್/ ಸಿಸಿಸಿ/ ಆಸ್ಪತ್ರೆಗೆ ದಾಖಲಿಸುವಲ್ಲಿ ಕ್ರಮ ವಹಿಸುವುದು.
- ರ್‍ಯಾಪಿಡ್ ಆಂಟಿಜೆನ್ ಟೆಸ್ಟ್ ಪಾಸಿಟಿವ್ ಪ್ರಕರಣಗಳಿಂದ ಹೆಚ್ಚುವರಿಯಾಗಿ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಮಾದರಿಯನ್ನು ಸಂಗ್ರಹಿಸುವುದು ಹಾಗೂ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಪಾಸಿಟಿವ್ ಫಲಿತಾಂಶದ ಮಾದರಿಗಳ ಸಿ ಟಿ ವ್ಯಾಲ್ಯೂ >25 ಇದ್ದಲ್ಲಿ ಜೀನೊಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸುವುದು.
- ಎಲ್ಲರೂ ಕಡ್ಡಾಯವಾಗಿ ಮಾಸ್ಕ್ ಧರಿಸುವುದು ಹಾಗೂ ದೈಹಿಕ ಅಂತರವನ್ನು ಕಾಯ್ದುಕೊಳ್ಳುವುದು.
- ಸೋಂಕಿನ ಲಕ್ಷಣ ರಹಿತರಿಗೆ ದೊಡ್ಡ ಪ್ರಮಾಣದ / ಸಾಮೂಹಿಕ ಕೋವಿಡ್ 19 ಪರೀಕ್ಷೆಗಳನ್ನು ಶಿಫಾರಸ್ಸು ಮಾಡುವಂತಿಲ್ಲ.
- ಕ್ಲಸ್ಟರ್ ಪ್ರಕರಣಗಳು ವರದಿಯಾದ ಶಿಕ್ಷಣ ಸಂಸ್ಥೆಗಳಲ್ಲಿ ಪಾಸಿಟಿವ್ ಪ್ರಕರಣಗಳು ವರದಿಯಾದ ಕೊಠಡಿಗಳನ್ನು 1% ಸೋಡಿಯಂ ಹೈಪೋಕ್ಲೋರೈಟ್‌ದ್ರಾವಣದಿಂದ (1 ಗಂಟೆ ಸಂಪರ್ಕಅವಧಿ) ಸ್ವಚ್ಛಗೊಳಿಸಬೇಕು ಮತ್ತು ಮರುದಿನದಿಂದ ಕೊಠಡಿಗಳನ್ನು ಪುನಃ ಬಳಕೆ ಮಾಡಬಹುದು.

Rh

- ಆದಾಗ್ಯೂ, ಕಛೇರಿಗಳು ಹಾಗೂ ವಿದ್ಯಾಸಂಸ್ಥೆಗಳು / ಕಾಲೇಜ್‌ಗಳನ್ನು ಮುಚ್ಚುವ ಅವಶ್ಯಕತೆ ಇಲ್ಲ.
- ಕಛೇರಿಗಳು ಹಾಗೂ ವಿದ್ಯಾಸಂಸ್ಥೆಗಳು / ಕಾಲೇಜ್‌ಗಳಲ್ಲಿ ಕೋವಿಡ್ 19 ಲಸಿಕೆಯ ಮುನ್ನೆಚ್ಚರಿಕೆ ಡೋಸ್ ಪಡೆಯಲು ಬಾಕಿ ಇರುವವರನ್ನು ಲಸಿಕೆ ಪಡೆಯುವಂತೆ ಪ್ರೇರೆಪಿಸುವುದು.

3. **ಶಾಲೆಗಳು ( 12 ನೇ ತರಗತಿಯವರೆಗೆ)**

- ಕೋವಿಡ್ 19ನ ಲಕ್ಷಣಗಳನ್ನು ಹೊಂದಿರುವವರು ಶಾಲೆಗೆ ಹಾಜರಾಗದಂತೆ ಸೂಚಿಸುವುದು. ಸದರಿಯವರು ರ್ಯಾಪಿಡ್ ಆಂಟಿಜೆನ್ ಪರೀಕ್ಷೆಗೆ ಒಳಪಡುವುದು ಹಾಗೂ ಪಾಸಿಟಿವ್ ಫಲಿತಾಂಶ ಬಂದಲ್ಲಿ, ಶಿಷ್ಟಾಚಾರದ ಅನ್ವಯ ಐಸೋಲೇಷನ್‌ನಲ್ಲಿ ಇರಿಸಿ ನಿರ್ವಹಣೆ ಮಾಡುವುದು. ರ್ಯಾಪಿಡ್ ಆಂಟಿಜೆನ್ ಪರೀಕ್ಷೆಯಲ್ಲಿ ನೆಗೆಟಿವ್ ಫಲಿತಾಂಶ ಬಂದಲ್ಲಿ, ಆರ್‌ಟಿಪಿಸಿಆರ್ ಮಾದರಿಯನ್ನು ನೀಡಿ , ಐಸೊಲೇಷನ್‌ನಲ್ಲಿದ್ದು, ಫಲಿತಾಂಶವನ್ನು ನಿರೀಕ್ಷಿಸುವುದು. ಫಲಿತಾಂಶದ ನಂತರ ಅಗತ್ಯ ಕ್ರಮ ವಹಿಸುವುದು.
- ಕ್ಲಸ್ಟರ್ / ಸಾಂಕ್ರಾಮಿಕ ಸ್ಫೋಟಗಳು ವರದಿಯಾದಲ್ಲಿ ರೋಗ ಲಕ್ಷಣಗಳಿರುವವರಿಗೆ ರ್ಯಾಪಿಡ್ ಆಂಟಿಜೆನ್ ಪರೀಕ್ಷೆ ಮಾಡುವುದು. ದೃಢಪಟ್ಟ ಪ್ರಕರಣಗಳನ್ನು ರಾಜ್ಯದಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿಯ ಅನ್ವಯ ಹಾಗೂ ಪಾಸಿಟಿವ್ ವ್ಯಕ್ತಿಯ ಆರೋಗ್ಯ ಸ್ಥಿತಿಗೆ ಅನುಗುಣವಾಗಿ ಹೋಂ ಐಸೋಲೇಷನ್/ ಸಿಸಿಸಿ/ ಆಸ್ಪತ್ರೆಗೆ ದಾಖಲಿಸುವಲ್ಲಿ ಕ್ರಮ ವಹಿಸುವುದು.
- ರ್ಯಾಪಿಡ್ ಆಂಟಿಜೆನ್ ಟೆಸ್ಟ್ ಪಾಸಿಟಿವ್ ಪ್ರಕರಣಗಳಿಂದ ಹೆಚ್ಚುವರಿಯಾಗಿ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಮಾದರಿಯನ್ನು ಸಂಗ್ರಹಿಸುವುದು ಹಾಗೂ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಪಾಸಿಟಿವ್ ಫಲಿತಾಂಶದ ಮಾದರಿಗಳ ಸಿ ಟಿ ವ್ಯಾಲ್ಯೂ >25 ಇದ್ದಲ್ಲಿ ಜೀನೋಮ್ ಸೀಕ್ವೆನ್ಸಿಂಗ್‌ಗೆ ಕಳುಹಿಸುವುದು.
- ಶಾಲೆಗಳಲ್ಲಿ ಪಾಸಿಟಿವ್ ಪ್ರಕರಣಗಳು ವರದಿಯಾದ ಕೊಠಡಿಗಳನ್ನು 1% ಸೋಡಿಯಂ ಹೈಪೋಕ್ಲೋರೈಟ್‌ದ್ರಾವಣದಿಂದ (1 ಗಂಟೆ ಸಂಪರ್ಕ ಅವಧಿ) ಸ್ವಚ್ಛಗೊಳಿಸಬೇಕು ಮತ್ತು ಮರುದಿನದಿಂದ ಕೊಠಡಿಗಳನ್ನು ಪುನಃ ಬಳಕೆ ಮಾಡಬಹುದು,
- ಕೋವಿಡ್-19 ಸೂಕ್ತ ನಡವಳಿಕೆಗಳ ಪಾಲನೆ : ಕಡ್ಡಾಯ ಮಾಸ್ಕ್ ಧರಿಸುವಿಕೆ, ದೈಹಿಕ ಅಂತರ ಪಾಲನೆ , ಹ್ಯಾಂಡ್ ಸ್ಯಾನಿಟೈಸರ್‌ಗಳ ಬಳಕೆಗೆ ಅವಕಾಶ, ಪ್ರವೇಶ ದ್ವಾರದಲ್ಲಿ ಜ್ವರ ತಪಾಸಣೆಗೆ ಥರ್ಮಲ್‌ಗಳ ಬಳಕೆ ಹಾಗೂ ಜ್ವರ, ನೆಗಡಿ, ಕೆಮ್ಮ ಹಾಗೂ ಉಸಿರಾಟದ ತೊಂದರೆ ಗಳಿರುವವರನ್ನು ಸೂಕ್ತ ವೈದ್ಯಕೀಯ ಚಿಕಿತ್ಸೆ ಪಡೆಯಲು ಶಿಫಾರಸ್ಸು ಮಾಡುವುದು.
- ಆದಾಗ್ಯೂ, ಶಾಲೆಗಳನ್ನು ಮುಚ್ಚುವ ಅವಶ್ಯಕತೆ ಇಲ್ಲ.

ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ, ಮೇಲೆ ತಿಳಿಸಿದ ಎಲ್ಲಾ ಅಂಶಗಳು ಕಡ್ಡಾಯವಾಗಿ ಪಾಲನೆಯಾಗುವಂತೆ, ಅಪಾರ್ಟ್‌ಮೆಂಟ್‌ಗಳಲ್ಲಿನ ರೆಸಿಡೆಂಟ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಮುಖ್ಯಸ್ಥರಿಗೆ ಹಾಗೂ ಕಛೇರಿ . ಶಾಲೆಗಳು, ವಿದ್ಯಾ ಸಂಸ್ಥೆಗಳು / ಕಾಲೇಜುಗಳ ಮುಖ್ಯಸ್ಥರಿಗೆ ಸೂಚಿಸಿ ಖಚಿತ ಪಡಿಸಿಕೊಳ್ಳುವುದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಬೆಂಗಳೂರು ನಗರ ಜಿಲ್ಲಾಡಳಿತದ ಜವಾಬ್ದಾರಿಯಾಗಿರುತ್ತದೆ.

RLP 28.06.22

(ರಂದೀಪ್.ಡಿ)
**ಆಯುಕ್ತರು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

**ಇವರಿಗೆ,**

1. ವಿಶೇಷ ಆಯುಕ್ತರು ( ಆರೋಗ್ಯ ಹಾಗೂ ತಂತ್ರಜ್ಞಾನ), ಬಿ ಬಿ ಎಂ ಪಿ, ಬೆಂಗಳೂರು.
2. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
3. ಮುಖ್ಯ ಆರೋಗ್ಯಾಧಿಕಾರಿಗಳು ( ಸಾರ್ವಜನಿಕ ಆರೋಗ್ಯ) , ಬಿ ಬಿ ಎಂ ಪಿ, ಬೆಂಗಳೂರು.

4. ಅಭಿಯಾನ ನಿರ್ದೇಶಕರು – ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಸೌಧ, ಬೆಂಗಳೂರು.
5. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ, ಬೆಂಗಳೂರು.

**ಪ್ರತಿಯನ್ನು ಅವಗಾಹನೆಗಾಗಿ ಸಲ್ಲಿಸಿದೆ.**

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ.
2. ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಕರ್ನಾಟಕ ಸರ್ಕಾರ.
3. ಆಡಳಿತಾಧಿಕಾರಿಗಳು, ಬಿ ಬಿ ಎಂ ಪಿ, ಬೆಂಗಳೂರು.
4. ಮುಖ್ಯ ಆಯುಕ್ತರು, ಬಿ ಬಿ ಎಂ ಪಿ, ಬೆಂಗಳೂರು.
5. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು, ಇವರ ಆಪ್ತ ಕಾರ್ಯದರ್ಶಿಗಳು.

Office Tel : +91 80 23354039
+91 80 23354085
E-mail: com-hfws@karnataka.gov.in

# COMMISSIONERATE

## Health &Family Welfare Services

No: NVBDCP/EST – 7Z/Covid 19/ 2020-21 Date:28.6.2022

## CIRCULAR

Subject: Covid 19 - Testing, isolation, treatment, quarantine for clusters in Apartments , offices & Educational Institutions in BBMP and Bengaluru Urban district - Updated guidelines : Regarding.

Reference: Proceedings of 174th meeting of State Covid 19 Technical Advisory Committee, Dated 23rd June 2022.

Considering the gradual rise of Covid 19 cases in Bangalore city from 10th June 2022 onwards, it is imperative to comply with the updated guidelines as mentioned below for Testing, Isolation, Treatment, Quarantine for clusters in Apartments /Offices/ Educational Institutions.

1. **Apartments**

   In the case of occurrence of clusters in apartment complexes, the following actions shall be immediately taken.

- In case of small clusters ( 3-5 cases) all symptomatics in the apartment block on the floor ; in large cluster(≥ 5 cases) all symptomatics in the apartments of the block/tower; in outbreak (≥15cases) all symptomatics in the apartment complex as determined by the local health authority shall be tested by RAT and those positive shall be isolated and managed as per State guidelines i.e., home isolation/CCC/hospitalization depending on the medical condition of the Covid positive person.
- Additional sample for RT-PCR shall be taken from those who test RAT positive, for genomic sequencing and those samples with Ct value less than 25 shall be sent for WGS.
- All High Risk asymptomatics, like those above 60 years of age and / or co-morbid, shall also be tested by RT-PCR.
- Large scale / mass testing of the asymptomatics is not recommended, except if he/she is a primary contact.
- Strict enforcement of Covid Appropriate Behaviour like compulsory face masking, etc. in common areas should be ensured.
- For domestic helps working in households having COVID-19 infected person/s under home isolation, the following shall be duly complied.
    - The domestic help shall be below 60 years of age

- Shall be strictly asymptomatic (free from fever/cough/running nose/sore throat/breathing difficult/etc.)
  - Shall wear N-95 mask while working.
  - Shall be preferably two dose / precautionary dose vaccinated.
- The facilities in the common areas like club house, swimming pool, reading rooms, sports room, association office , etc. shall be closed till the recovery of last case of Covid 19. In the cluster subsequently the facilities shall be sanitized using 1% sodium hypochlorite solution ( 1 hour contact period ) and could be reused later on.
- There is no need to seal down/close down the floors/towers/blocks/ apartment complexes, etc. during this period.
- After the cluster/outbreak is denotified by the local health authority, those due for precautionary doses of vaccination shall be motivated to take the vaccination.

2. **Offices and educational institutions/colleges (other than schools up to 12th standard)**

- It should be informed that those with Covid symptoms shall not attend office, college, etc. Instead they should go in for RAT testing and if positive, isolate and be managed as per State protocol. If RAT is negative , then they should give sample for RT-PCR , isolate and await results of the test and act accordingly.
- If someone tests positive, primary contacts who are symptomatics shall be tested by RAT and if positive shall be isolated and managed as per State protocol.
- If clusters/ out breaks are reported then all symptomatics shall be tested by RAT and those found positive, shall be isolated and managed as per State guidelines like home isolation/CCC/hospitalization depending on the medical condition of the Covid positive person.
- Additional sample for RT-PCR shall be taken from those who test RAT positive for genomic sequencing and those samples with Ct value less than 25 shall be sent for WGS.
- All shall compulsorily wear face mask and maintain physical distancing.
- Large scale / mass testing of asymptomatics is not recommended.
- After cluster / outbreak the related office area / class room/s ( from where the positive case/s were reported ) shall be sanitized using 1% sodium hypochlorite solution ( 1 hour contact period ) and could be reused from the next day.
- However, there is no need to close down the offices and colleges/educational institutions.

PTO

- Those due for precautionary doses of vaccination shall be motivated to take the vaccination.

3. **In schools (up to 12th standard)**
   - It should be informed that those with Covid symptoms shall not attend school . Instead they go in for RAT testing and if positive, isolate and be managed as per State protocol. If RAT negative , give sample for RT-PCR , isolate , await results of the test and act accordingly.
   - If clusters/ out breaks are reported all symptomatics shall be tested by RAT and those positive, isolated and managed as per state guidelines like home isolation/CCC/hospitalization depending on the medical condition of the Covid positive person.
   - Additional sample for RT-PCR shall be taken from those who test RAT positive for genomic sequencing and those samples with Ct value less than 25 shall be sent for WGS
   - The related class room/s ( from where the positive case/s are reported ) shall be sanitized using 1% sodium hypochlorite solution ( 1 hour contact period ) and reused from the next day.
   - There shall be strict compliance to Covid Appropriate Behaviour ( CAB) like compulsory face masking , physical distancing, provision for Hand sanitizer, screening for symptomatic at the entrance for fever using thermal scanner etc., And those found having fever / symptoms like cough , cold . throat pain , breathing difficulty are referred to seek medical consultation.
   - However, there is no need to close down the schools.

The concerned authorities in BBMP and Bengaluru Urban District shall ensure that the Residents Welfare Associations in Apartments and Heads / Administrators at offices & educational institutions shall comply the same in the larger interest of Public Health.

28.06.22

**( Randeep .D)**
**Commissioner**
**Health & F W Services**

**To:**

1. The Special Commissioner – Health & IT, BBMP, Bengaluru
2. The Deputy Commissioner , Bengaluru Urban District
3. The Chief Health Officer – Public Health, BBMP, Bengaluru
4. The District Health Officer, Bengaluru Urban District
5. The Mission Director-National Health Mission
6. The Director, Health & Family Welfare Services

**Copy for kind information to:**

1. Chief Secretary, GoK
2. Additional Chief Secretary , Dept of Health & F Welfare, GoK
3. The Administrator – BBMP, Bengaluru.
4. The Chief Commissioner – BBMP, Bengaluru
5. PS to Hon'ble Minister for HFW and Medical Education.